2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 35/2022

ಪಿ.ಡಬ್ಲ್ಯು: 8 ಸಿಡಬ್ಲ್ಯು:15

| | | |
|---|---|---|
| ಸಾಕ್ಷಿಯ ಹೆಸರು | : | ಇಬ್ರಾಹಿಂ |
| ತಂದೆಯ ಹೆಸರು | : | ಖಾದರ್ |
| ವಯಸ್ಸು | : | 53 ವರ್ಷ |
| ವೃತ್ತಿ | : | ಜೀನ್ಸ್ ವ್ಯಾಪಾರ ಮತ್ತು ಮಹಾನಗರ ಪಾಲಿಕೆ ಸದಸ್ಯರು |
| ವಾಸಸ್ಥಳ | : | ವಿಲ್ಲರ್ ಪೇಟೆ, ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 30.07.2025.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

ನನಗೆ ಚಾಸಾ-1, 5 ಮತ್ತು ಮೃತ ಶ್ರಾವಂತಿ ಇವರ ಪರಿಚಯ ಇದೆ. ನನಗೆ ಹಾಜರಿರುವ 1 ರಿಂದ 8 ನೇ ಆರೋಪಿತರ ಪರಿಚಯ ಇದೆ. ನನಗೆ ಚಾಸಾ-1, 5 ಹಾಗೂ ಶ್ರಾವಂತಿ ಇವರ ಪರಿಚಯ ಸುಮಾರು ವರ್ಷಗಳಿಂದ ಇದೆ. 1 ನೇ ಆರೋಪಿ ಶ್ರಾವಂತಿ ಇವಳನ್ನು ಮದುವೆ ಆಗಿದ್ದ ಆದ್ದರಿಂದ ಅವರ ಪರಿಚಯ ಇದೆ. 2 ರಿಂದ 8 ನೇ ಆರೋಪಿತರು 1 ನೇ ಆರೋಪಿತನ ಅಕ್ಕ ತಂಗಿಯರು ಹಾಗೂ ಭಾವ ಆಗಬೇಕು. ಆರೋಪಿತರ ಮನೆ ರೂಪನಗುಡಿ ರಸ್ತೆಯಿಂದ ಹರಿಶ್ಚಂದ್ರ ಘಾಟ್ ಗೆ ಹೋಗುವ ರಸ್ತೆಯಲ್ಲಿ ಇದೆ. ದಿನಾಂಕ 12.03.2020 ರಂದು ಶ್ರಾವಂತಿ ಇವಳ ಮದುವೆ 1 ನೇ ಆರೋಪಿತನೊಂದಿಗೆ ಅನಂತಪುರ ರಸ್ತೆಯಲ್ಲಿರುವ ಬಳ್ಳಾರಿಯಲ್ಲಿ ಆಗಿರುತ್ತದೆ. ಸದರಿ ಮದುವೆಯಲ್ಲಿ ನಾನು ಭಾಗವಹಿಸಿರುತ್ತೇನೆ.

ಮದುವೆಯ ಮುಂಚೆ ಆದ ಮಾತುಕತೆಯಲ್ಲಿ ನಾನು ಹಾಗೂ ಚಾಸಾ-16 ರಾಕೇಶ್ ಹೋಗಿದ್ದೆವು. ಮಾತುಕತೆ ನಡೆಯುವ ಸಮಯದಲ್ಲಿ 1 ನೇ ಆರೋಪಿ ಹಾಗೂ ಅವರ ಕುಟುಂಬದವರು ರೂ.5 ಲಕ್ಷ ಹಣ ಬೇಕು ಎಂದು ಮತ್ತು 10 ತೊಲೆ ಬಂಗಾರ ಬೇಕು ಎಂದು ಕೇಳಿದ್ದರು. ಅದಕ್ಕೆ ಚಾಸಾ-1 ಇವರು ನನಗೆ ರೂ. 2 ಲಕ್ಷ ಹಣ ಕೊಡಲು ಆಗುತತದೆ

ಆದ್ದರಿಂದ ರೂ. **2** ಲಕ್ಷ ಹಣ ಕೊಡುತ್ತೇನೆ ಮತ್ತು ಹುಡುಗನಿಗೆ **8** ತೊಲೆ ಬಂಗಾರ ಕೊಡುತ್ತೇನೆ ಎಂದು ಹೇಳಿದ್ದರು. ಮಾತುಕತೆ ಆದ ನಂತರ ರೂ.**2** ಲಕ್ಷ ಹಣ ಮತ್ತು **8** ತೊಲೆ ಬಂಗಾರ ನೀಡಿದ್ದರು. ಆಮೇಲೆ ಮದುವೆ ಆಯಿತು.

ಮದುವೆಯಾದ ನಂತರ **1** ನೇ ಆರೋಪಿ ಹಾಗೂ ಶ್ರಾವಂತಿ ಸುಮಾರು **3-4** ತಿಂಗಳ ವರೆಗೆ ಚೆನ್ನಾಗಿ ಇದ್ದರು. ನಂತರ **1** ನೇ ಆರೋಪಿ ಮತ್ತು ಕುಟುಂಬದವರು ಶ್ರಾವಂತಿ ಇವಳಿಗೆ ವರದಕ್ಷಿಣೆ ಸಲುವಾಗಿ ಕಿರುಕುಳ ಕೊಡುವುದನ್ನು ಪ್ರಾರಂಭಿಸಿದರು. ಈ ವಿಷಯವನ್ನು ಚಾಸಾ-**1** ಇವರು ಎರಡು ಮೂರು ಬಾರಿ ನಮ್ಮ ಬಳಿ ಚರ್ಚಿಸಿರುತ್ತಾರೆ. ನಾನು, ಚಾಸಾ-**16,** ಚಾಸಾ-**13** ಹಾಗೂ **14** ಎಲ್ಲರೂ ಕೂಡಿ **1** ನೇ ಆರೋಪಿತನ ಮನೆಗೆ ಹೋಗಿ ಅವರಿಗೆ ಬುದ್ದಿವಾದ ಹೇಳಿ ಬಂದಿರುತ್ತೇವೆ. ತದನಂತರವು ಆರೋಪಿತರು ಶ್ರಾವಂತಿಗೆ ಅದೇ ಕಿರುಕುರಳ ಕೊಡುವುದನ್ನು ಮುಂದುವರೆಸಿದ್ದರು. ನಂತರವೂ ಕೂಡ ನಾವು ಅವರಿಗೆ ಬುದ್ದಿವಾದ ಹೇಳಿರುತ್ತೇವೆ.

ಕಿರುಕುಳ ಹೆಚ್ಚಾದ್ದ ನಂತರ ಶ್ರಾವಂತಿ ತವರು ಮನೆಗೆ ಬಂದಾಗ ಅವಳ ತವರು ಮನೆಯಲ್ಲಿ ಆರೋಪಿತರೆಲ್ಲರನ್ನು ಕರೆಸಿ ಪಂಚಾಯಿತಿಯನ್ನು ಮಾಡಿದ್ದೆವು. ದಿನಾಂಕ **21.11.2021** ರಂದು ನನಗೆ ಸಾಯಂಕಾಲ **06-06.15** ಗಂಟೆಗೆ ಚಾಸಾ-**16** ಇವರಿಂದ ದೂರವಾಣಿ ಕರೆ ಬಂದು ಅದರಲ್ಲಿ ಚಾಸಾ-**1** ಇವರ ಸಹೋದರಿ ತೀರಿಕೊಂಡಿದ್ದಾಳೆ ನನಗೆ ವಿಮ್ಸ್ ಆಸ್ಪತ್ರೆ ಗೆ ಬರಲು ಹೇಳಿದ್ದರು. ನಾನು ಅಲ್ಲಿ ಹೋದಾಗ ಶ್ರಾವಂತಿ ಇವಳ ಶವವನ್ನು ಶವಾಗಾರದಲ್ಲಿ ಇಟ್ಟಿದ್ದರು. ಅಲ್ಲೆಯೇ ಇದ್ದ ಚಾಸಾ-**1** ಇವರು ಮುಂಜಾನೆಯಿಂದ ಆರೋಪಿತರೆಲ್ಲರೂ ಶ್ರಾವಂತಿ ಇವಳಿಗೆ ಹಿಂಸೆ ನೀಡುತ್ತಿದ್ದಾರೆ ಇಂದೂ ಏನಾದರು ಮಾಡಿ ಹಣ ತಂದು ಕೊಡಬೇಕು ಎಂದು ಹಿಂಸಿಸುತ್ತಿದ್ದರು ಅದಕ್ಕೆ ಚಾಸಾ-**1** ಇವರು ಆರೋಪಿತರನ್ನು ತಮ್ಮ ಮನೆಗೆ ಕರೆಸಿಕೊಂಡಿದ್ದರು, ಅದಕ್ಕೆ ದುಡ್ಡು ತರಲೇಬೇಕು ಎಂದು ಹೇಳಿದಾಗ ಅವರು ಹೊಂದಿಸಿಕೊಂಡು ಬರುತೆ್ತೀನೆ ಎಂದು ಹೇಳಿ ಹೋಗಿದ್ದರು. ಆಸಮಯದಲ್ಲಿ ಆರೋಪಿತರೆಲ್ಲರೂ ಶ್ರಾವಂತಿ ಇವಳಿಗೆ ಉಟವನ್ನು ಕೊಡದೇ ಹಾಗೂ ಮಗುವಿಗೆ ಕುಡಿಸಲು ಹಾಲನ್ನು ಕೊಡದೆ ಹಿಂಸಿಸಿದ್ದಾರೆ ಎಂದು ನನ್ನ ಮುಂದೆ ಹೇಳಿದ್ದ ತಂದನಂತರ **1** ನೇ

ಆರೋಪಿ ಚಾಸಾ-**1** ಇವರಿಗೆ ದೂರಣವಾಣಿ ಕರೆ ಮಾಡಿ ಅದರಲ್ಲಿ ನಿನ್ನ ತಂಗಿ ನೇಣು ಹಾಕಿ ಕೊಂಡಿದ್ದಾಳೆ ಎಂದು ತಿಳಿಸಿದ್ದ. ಎಂದು ಚಾಸಾ-**1** ಇವರು ನನಗೆ ತಿಳಿಸಿದ್ದರು.

ಆರೋಪಿತರೆಲ್ಲರೂ ಶ್ರಾವಂತಿಯನ್ನು ಕರೆದುಕೊಂಡು ಬಳ್ಳಾರಿಯ ಜಿಲ್ಲಾಸ್ಪತ್ರೆಗೆ ಹೋದರು ಅಲ್ಲಿ ಅಲ್ಲಿನ ವೈದ್ಯರು ಶ್ರಾವಂತಿ ಇವಳ ಜೀವ ಹೋಗಿರುತ್ತದೆ ಎಂದು ಹೇಳಿದ್ದರು. ಅಲ್ಲಿಂದಂ ಅವಳನ್ನು ವಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಶ್ರಾವಂತಿ ಇವಳ ಸಾವಿಗೆ ಆರೋಪಿತರೆಲ್ಲರೂ ಪದೇ ಪದೆ ವರದಕ್ಷಿಣೆ ಬೇಕು ಎಂದು ಕೇಳಿದ್ದೇ ಕಾರಣವಾಗಿರುತ್ತದೆ. ಈ ವಿಷಯವಾಗಿ ಪೊಲೀಸರು ನನ್ನನ್ನು ವಿಚಾರ ಮಾಡಿ ದಿನಾಂಕ **30.11.2021** ರಂದು ಹೇಳಿಕೆ ಪಡೆದುಕೊಂಡಿದ್ದಾರೆ.

<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ. ಎ. ಬಿ. ವಕೀಲರಿಂದಃ</u>

ಮದುವೆಗಿಂತ ಮೊದಲು ಮಾತುಕತೆ ಚಾಸಾ-**1** ಇವರ ಮನೆಯಲ್ಲಿ ಜನವರಿ **2020** ರಲ್ಲಿ ಆಗಿರುತ್ತದೆ ಆದರೆ ದಿನಾಂಕ ನಿಖರವಾಗಿ ನೆನಪಿಲ್ಲ. ಸದರಿ ಮದುವೆ ಮಾತುಕತೆಯಲ್ಲಿ ನಾನು, ಚಾಸಾ-**16,** ಚಾಸಾ-**13,** ಚಾಸಾ-**14** ಹಾಗೂ **1** ನೇ ಆರೋಪಿ ಮತ್ತು ಅವನ ಕುಟುಂಬದವರು ಭಾಗವಹಿಸಿದ್ದರು. ವರ ಮತ್ತು ವಧುವಿನ ಸಮಾಜದ ಹಿರಿಯರು ಬೇರೆ ಯಾರು ಇರಲಿಲ್ಲ. ಮದುವೆಯ ಮಾತುಕತೆಯ ಮುಖ್ಯ ವಿಷಯ ಏನೆಂದರೆ ವರದಕ್ಷಿಣೆ ಬಂಗಾರ ಮದುವೆ ಎಲ್ಲಿ ಮಾಡಿಕೊಡಬೇಕು ಎಷ್ಟು ದಿನದಲ್ಲಿ ಮಾಡಿಕೊಡಬೇಕು ಎಂಬುದು ಆಗಿತ್ತು. ಶ್ರಾವಂತಿಗೆ ಕೊಡುವ ಬಗ್ಗೆ ಚರ್ಚೆ ಆಗಲಿಲ್ಲ **1** ನೇ ಆರೋಪಿಗೆ ವರದಕ್ಷಿಣೆ ಕೊಡುವ ಬಗ್ಗೆ ಚರ್ಚೆ ಆಯಿತು. ನಾನು ಮುಸ್ಲಿಂ ಸಮಾಜದವನು ಎಂದರೆ ಸರಿ. ಶ್ರಾವಂತಿ ಹಾಗೂ **1** ನೇ ಆರೋಪಿ ಕುರುಬ ಸಮಾಜದವರು. ಕುರುಬ ಸಮಾಜದಲ್ಲಿ ಯಾವ ರೂಢಿ ಸಂಪ್ರದಾಯ ಇದೆ ಎಂದು ನನಗೆ ಅಷ್ಟೊಂದು ವಿವರವಾಗಿ ಗೊತ್ತಿಲ್ಲ. ಈ ಹಿಂದೆ ಕುರುಬ ಸಮಾಜದ ಬೇರೆ ಮದುವೆ ಮಾತುಕತೆಯ ಭಾಗವಹಿಸಿದ ಬಗ್ಗೆ ನೆನಪಿಲ್ಲ. ನಮ್ಮ ಸಮಾಜದ ಮದುವೆ ಮಾತುಕತೆಯಲ್ಲಿ ನಾನು ಹೋಗಿರುತ್ತೇನೆ.

ಕುರುಬ ಸಮಾಜದಲ್ಲಿ ವರದಕ್ಷಿಣೆ ಕೊಡುವ ಸಂಪ್ರದಾಯ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವರದಕ್ಷಿಣೆ ವಿಚಾರವನ್ನು ನಿರ್ದಿಷ್ಟವಾಗಿ ಮೊದಲನೆಯ ಬಾರಿಗೆ 1 ನೇ ಆರೋಪಿಯ ಭಾವ ವಿರೇಶ ಮತ್ತು ಲಕ್ಷ್ಮಿ ಇವರು ಕೇಳಿದರು. ಈ ವಿಷಯವನ್ನು ನಾನು ಪೊಲೀಸರಿಗೆ ನೀಲಡಿದ ಹೆಳಿಕೆಯಲ್ಲಿ ಹೇಳಿದ್ದೇನೆ ಆದರು ಅವರು ಬರೆದುಕೊಂಡಿಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ಓದಿ ನೋಡಿದ್ದೇನೆ. ಪೊಲೀಸರಿಗೆ ನಾನು ಹೇಳಿದ ವಿಷಯವನ್ನು ಏಕೆ ಬರೆದುಕೊಂಡಿಲ್ಲ ಎಂದು ಕೇಳಿಲ್ಲ. ಅವರು ನೊಟೀಸಿಗೆ ನನ್ನ ಸಹಿ ಪಡೆದುಕೊಂಡಿದ್ದರು. ಹೇಳಿಕೆಗೆ ನನ್ನ ಸಹಿ ಪಡೆದುಕೊಂಡಿಲ್ಲ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಮಾತುಕತೆಗೆ ನಾನು ಮತ್ತು ಚಾಸಾ-16 ಹೋಗಿದ್ದೆವು ಎನ್ನುವ ವಿಷಯವನ್ನು ಹೇಳಿದ್ದೆವು ಆದರೆ ಅವರು ಹೇಳಿಕೆಯಲ್ಲಿ ನಮೂದಿಸಿಲ್ಲ. 1 ನೇ ಆರೋಪಿ ಮತ್ತು ಅವನ ಕುಟುಂಬದವರು ರೂ5 ಲಕ್ಷ ಹಣ 10 ತೊಲೆ ಬಂಗಾರ ಬೇಡಿಕೆ ಇಟ್ಟಿದ್ದರು ಎನ್ನುವ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಚಾಸಾ-1 ಇವರು ರೂ.2 ಲಕ್ಷ ಹಣ 8 ತೊಲೆ ಬಂಗಾರ ಕೊಡಲು ಒಪ್ಪಿಕೊಂಡಿದ್ದರು ಎನ್ನುವ ವಿಷಯವನ್ನು ಹೇಳಿಲ್ಲ ಎಂದರೆ ಸರಿಯಲ್ಲ.

ಮದುವೆ ದಿನಾಂಕ ನಿಗದಿಪಡಿಸಿದ ಬಗ್ಗೆ ಮತ್ತು ವರದಕ್ಷಿಣೆ ಕೊಡುವ ಬಗ್ಗೆ ಲಿಖಿತವಾಗಿ ದಾಖಲೆಯನ್ನು ಮಾಡಲಿಲ್ಲ. ಆ ದಿವಸ ಯಾವುದೇ ಮಾತುಕತೆ ಆಗಿಲ್ಲ, ಆರೋಪಿತರು ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ, ಆದರಿಂದ ಆ ಬಗ್ಗೆ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಮತ್ತು ಯಾವುದೇ ಲಿಖಿತ ದಾಖಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ ಅವರ ಕುಟುಂಬದವರು ರೂ5 ಲಕ್ಷ ಹಣ 10 ತೊಲೆ ಬಂಗಾರ ದ ಬೇಡಿಕೆ ಇಟ್ಟಿದ್ದರು ಎನ್ನುವ ವಿಷಯವನ್ನು ಇಂದೇ ಮೊದಲೇ ಬಾರಿಗೆ ನ್ಯಾಯಲಯದ ಮಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ ಅವರ ಕುಟುಂಬದವರು ರೂ5 ಲಕ್ಷ ಹಣ 10 ತೊಲೆ ಬಂಗಾರ ದ ಬೇಡಿಕೆ ಇಟ್ಟಿದ್ದರು ಎನ್ನುವ ವಿಷಯವನ್ನು ನಾನು ಪೊಲೀಸರಿಗೆ ಬಿಟ್ಟು ಬೇರೆ ಯಾರಿಗೂ ಹೇಳಿಲ್ಲ.

ಮದುವೆ ಸಮಯದಲ್ಲಿ ವರದಕ್ಷಿಣೆ ನೀಡುವಾಗ ಅವರಿಬ್ಬರ ಕುಟುಂಬದಸದಸ್ಯರು ಇದ್ದರು ಎಷ್ಟು ಜನರು ಹಾಜರಿದ್ದರು ಎಂದು ನಾನು ಎಣಿಕೆಯನ್ನು ಮಾಡಲಿಲ್ಲ. ಮದುವೆಯಲ್ಲಿ ಸ್ಟೇಜ್ ಮೇಲೆ ಎಷ್ಟು ಜನರು ಇದ್ದರು ನಾನು ನಿಖರವಾಗಿ ಎಣಿಕೆಯನ್ನು ಮಾಡ್ಲಿಲ. ವರದಕ್ಷಿಣೆ ಹಣವನ್ನು ನಗದು ರೂಪದಲ್ಲಿ 1 ನೇ ಆರೋಪಿಗೆ ಚಾಸಾ-1 ಇವರ ಮನೆಯಲ್ಲಿ ನೀಡಿರುತ್ತಾರೆ. ಆ ಹಣವನ್ನು ನಾನು ಎಣಿಸಿ ನೋಡಲಿಲ್ಲ. ಚಾಸಾ-1 ಇವರು ರೂ.2 ಲಕ್ಷ ಹಣ ಇದೆ ಎಂದು ಹೇಳಿದ್ದರಿಂದ ನಾನು ಅವರಿಗೆ ರೂ.2 ಲಕ್ಷ ಹಣ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೇನೆ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಸೂರ್ಯ ಭವನದ ಕಲ್ಯಾಣ ಮಂಟಪದಲ್ಲಿ ಮದುವೆಯ ಸಮಯದಲ್ಲಿ ರೂ.2 ಲಕ್ಷ ವರದಕ್ಷಿಣೆ ಹಣ, ಹಾಗೂ ಬಂಗಾರದ ಸರ, ಉಂಗುರ ಬ್ರಾಸ್‌ಲೈಟ್ ಸೇರಿ 8 ತೊಲೆ ಬಂಗಾರದ ಆಭಾರಣಗಳನ್ನು ಚಾಸಾ-1 ಇವರು ಅನಿಲಕುಮಾರನಿಗೆ ಕೊಡುವಾಗ ನಾನು, ರಾಕೇಶಕುಮಾರ, ಕೃಷ್ಣ ಹಾಗೂ ಲಕ್ಷ್ಮಿದೇವಿ ಹಾಜರಿದು ನನ್ನ ಸಮಕ್ಷಮ ಕೊಟ್ಟಿರುತ್ತಾರೆ ಎಂದು ಹೇಳಿರುವುದಿಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವೆರದು ಹೇಳುವುದೇನೆಂದರೆ ಪೊಲೀಸರು ಆ ರೀತಿ ತಪ್ಪು ಬರೆದುಕೊಂಡಿರುತ್ತಾರೆ. ಚಾಸಾ-1 ಇವರು ತಮ್ಮ ಮನೆಯಲ್ಲಿ 1 ನೇ ಆರೋಪಿಗೆ ವರದಕ್ಷಿಣೆ ಹಣ ಕೊಟ್ಟ ಬಗ್ಗೆ ಪೊಲೀಸರಿಗೆ ಹೇಳಿದ್ದೆ ಆದರೆ ಅವರು ಬರೆದುಕೊಂಡಿಲ್ಲ.

ಉಂಗುರ, ಸರ ಹಾಗೂ ಬ್ರಾಸ್ ಲೈಟ್ ಅನ್ನು ಚಾಸಾ-1 ಇವರು 1 ನೇ ಆರೋಪಿಗೆ ನೀಡಿರುತ್ತಾರೆ. ಉಂಗುರ 1 ತೊಲೆಯದ್ದು, 2 ತೊಲೆ ಚೈನು, ಹಾಗೂ 5 ತೊಲೆ ಬ್ರಾಸ್ ಲೈಟನ್ನು ಕೊಟ್ಟಿರುವುದಾಗಿ ಚಾಸಾ-1 ಇವರು ನನಗೆ ಹೇಳಿರುತ್ತಾರೆ. ನಾನು ಅವುಗಳನ್ನು ಕೈಯಲ್ಲಿ ಹಿಡಿದು ತೂಕ ಮಾಡಿಲ್ಲ. ಇವುಗಳನ್ನು 1 ನೇ ಆರೋಪಿಗೆ ಕೊಡುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಹಣ ಮತ್ತು ಬಂಗಾರದ ಆಭರಣಗಳನ್ನು ನೀಡುವಾಗ ವರನ ಯಾವ ಸ್ಥಾನದಲ್ಲಿ ಇದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಮನೆಯಲ್ಲಿ ಎದರು

ಬದರು ಕುಳಿತಿದ್ದೆವು ಎಂದು ಉತ್ತರಿಸುತ್ತಾರೆ. ಹಣ ಹಾಗೂ ಬಂಗಾರ ಕೊಡುವಾಗ ತೆಗೆದ ಭಾವಚಿತ್ರ ಗಳು ಇರುತ್ತವೆ ಎಂದು ಚಾಸಾ-1 ಇವರು ಹೇಳಿದ್ದರು. ನ್ಯಾಯಲಯದ ಮುಂದೆ ಹಾಜರು ಪಡಿಸಿದ ನಿಪಿ-3 ರಿಂದ 6 ಭಾವಚಿತ್ರ ಗಳಲ್ಲಿ ಹಣ ಮತ್ತು ಬಂಗಾರ ಕೊಡುವ ಬಗ್ಗೆ ಕಾಣಿಸುವುದಿಲ್ಲ ಎಂದರೆ ಅವುಗಳನ್ನು ಮದುವೆ ಮಂಟಪದಲ್ಲಿ ತೆಗೆದಿದ್ದಾರೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ಮನೆಯಲ್ಲಿ ಹಣ ಬಂಗಾರದ ಆಭರಣಗಳನ್ನು ಕೊಡುವಾಗ ಭಾವಚಿತ್ರ ತೆಗೆದ ಬಗ್ಗೆ ನನಗೆ ನೆನಪಿಲ್ಲ. ಆ ದಿವಸ ಯಾವೆವುದೇ ವರದಕ್ಷಿಣೆ ಕೊಟ್ಟಿಲ್ಲ ಮತ್ತು ತೆಗೆದುಕೊಂಡಿಲ್ಲ ಆ ಕಾಲಕ್ಕೆ ನಾನು ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮದುವೆಯಾದ ನಂತರ ನಾನು 1 ನೇ ಆರೋಪಿ ಮನೆಗೆ ಪಂಚಾಯಿತಿ ಮಾಡಲು ಹೋಗಿದ್ದೆ ಅದನ್ನು ಹೊರತು ಪಡಿಸಿ ನಾನು 1 ನೇ ಆರೋಪಿಯ ಮನಗೆ ಹೋಗಿಲ್ಲ. ಆರೋಪಿತರೆಲ್ಲರು ಶ್ರಾವಂತಿ ಇವಳಿಗೆ ಕಿರುಕುಳ ಕೊಡುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. 1 ನೇ ಆರೋಪಿಯ ಮನೆಗೆ ಹೋಗಿ ಪಂಚಾಯಿತಿ ಮಾಡಿದ ದಿನಾಂಕ ನೆನಪಿಲ್ಲ. 1 ನೇ ಆರೋಪಿಯ ಮುಂಜಾನೆ ಸುಮಾರು 11-12.00 ಗಂಟೆಗೆ ಹೋಗಿದ್ದೆವು. ಪಂಚಾಯತಿಗೆ ಹರಿಶ್ಚಂದ್ರ ಘಾಟನ ಹಿರಿಯರು ಯರೂ ಬಂದಿರಲಿಲ್ಲ. ಆರೋಪಿಯ ಕುಟುಂಬದವರು ಇದ್ದರು. ಅವರ ಕುಟುಂಬಂದ ಸದಸ್ಯರು ಬಿಟ್ಟರೆ ಪಂಚಾಯಿತಿಯಲ್ಲಿ ಬೇರೆ ಯಾರೂ ಇರಲಿಲ್ಲ. ಪಂಚಾಯತಿಯನ್ನು ಚಾಸಾ-1 ಇವರು ಸೇರಿಸಿದ್ದರು. ಪಂಚಾಯತಿಯಲ್ಲಿ ಚರ್ಚೆಯಾದ ವಿಷಯವನ್ನು ಬರವಣಿಗೆ ರೂಪದಲ್ಲಿ ಮಾಡಲಿಲ್ಲ. ಮೊದಲನೆ ಬಾರಿಗೆ ಪಂಚಾಯತಿ 1 ನೇ ಆರೊಪಿಯ ಮನೆಯಲ್ಲಿ ಆದ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ. ಸದರಿ ಪಂಚಾಯತಿಯಲ್ಲಿ ಶ್ರಾವಂತಿ ಇವಳ ಪರವಾಗಿ ಭಾಗವಹಿಸಿದ್ದೆ. 1 ನೇ ಆರೋಪಿಯ ಪರವಾಗಿ ಅವನ ಕುಟುಂಬದ ಸದಸ್ಯರು ಹೊರಗಿನವರು ಬೇರೆ ಯಾರು ಇರಲಿಲ್ಲ. 2 ನೇ ಬಾರಿ ನಡೆದ ಪಂಚಾಯತಿ ದಿನಾಂಕ ನೆನಪಿಲ್ಲ. 2 ನೇ ಬಾರಿ ನಡೆದ ಪಂಚಾಯತಿಯಲ್ಲಿ ಸಮಾಜದ ಹಿರಿಯರು ಯಾರೂ

ಭಾಗವಹಿಸಿರಲಿಲ್ಲ. ಯಾವುದೇ ರೀತಿಯ ಪಂಚಾಯತಿ ಆಗಿಲ್ಲ ಆದ್ದರಿಂದ ಸಮಾಜದ ಹಿರಿಯರು ಯಾರೂ ಭಾಗವಹಿಸಿಲ್ಲ ಎಂದರೆ ಸರಿಯಲ್ಲ.

ಶ್ರಾವಂತಿ ತವರು ಮನೆಗೆ ಯಾವ ದಿನಾಂಕದಂದು ಬಂದಿದ್ದಳು ಎಂದು ನನಗೆ ನೆನಪಿಲ್ಲ. ಚಾಸಾ-**1** ಇವರ ಮನೆಯಲ್ಲಿ ಪಂಚಾಯತಿ ಮಾಡಿದಾಗ ಯಾವುದೇ ಸಮಾಜದ ಹಿರಿಯರು ಬಂದಿರಲಿಲ್ಲ. ಆ ದಿವಸ ಚಾಸಾ-**1** ಇವರ ಮನೆಯಲ್ಲಿ ಯಾವುದೇ ಪಂಚಾಯತಿ ನಡೆದಿಲ್ಲ ಆದ್ದರಿಂದ ಯಾವುದೇ ಹಿರಿಯರು ಬಂದಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯತಿ ಆಗಿಲ್ಲ, ಸಸದರಿ ಪಂಚಾಯತಿಯಲ್ಲಿ ನಾನು ಹಾಜರಾಗಿಲ್ಲ ಹಾಗೂ ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ **21.11.2021** ರಂದು ಸಂಜೆ **06.00** ಗಂಟೆಗೆ ಚಾಸಾ-**16** ಇವರು ನನಗೆ ದೂರವಾಣಿ ಕರೆ ಮಾಡಿದ್ದರಿಂದ ನಾನು ವಿಮ್ಸ್ ಆಸ್ಪತ್ರೆಗೆ ಹೋಗಿದ್ದೆ ಎನ್ನುವ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಪೊಲಿಪೀಸರಿಗೆ ನೀಪಡಿದ ಹೇಳಿಕೆಯಲ್ಲಿ ದಿನಾಂಕ **21.11.2021** ರಂದು ಸಂಜೆ **06.00** ಗಂಟೆ ಸುಮಾರಿಗೆ ಲಕ್ಷ್ಮಿನರಸಿಂಹಲು ಇವರು ನನಗೆ ಪೋನ ಮಾಡಿ ವಿಮ್ಸ ಆಸ್ಪತ್ರೆ ಹತ್ತಿರ ಬರುವಂತೆ ತಿಳಿಸಿದ್ದರಿಂದ ನಾನು ವಿಮ್ಸ್ ಆಸ್ಪತೆಗೆ ನೊಡಲು ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-**2** ಎಂದು ಗುರುತಿಸಲಾಯಿತು.

ದಿನಾಂಕ **21.11.2021** ರಂದು ನನಗೆ ಸಾಯಂಕಾಲ **06-06.15** ಗಂಟೆಗೆ ಚಾಸಾ-**16** ಇವರಿಂದ ದೂರವಾಣಿ ಕರೆ ಬಂದು ಅದರಲ್ಲಿ ಚಾಸಾ-**1** ಇವರ ಸಹೋದರಿ ತೀರಿಕೊಂಡಿದ್ದಾಳೆ ನನಗೆ ವಿಮ್ಸ್ ಆಸ್ಪತ್ರೆಗೆ ಬರಲು ಹೇಳಿದ್ದರು, ನಾನು ಅಲ್ಲಿ ಹೋದಾಗ ಶ್ರಾವಂತಿ ಇವಳ ಶವವನ್ನು ಶವಾಗಾರದಲ್ಲಿ ಇಟ್ಟಿದ್ದರು, ಅಲ್ಲಿಯೇ ಇದ್ದ ಚಾಸಾ-**1** ಇವರು ಮುಂಜಾನೆಯಿಂದ ಆರೋಪಿತರೆಲ್ಲರೂ ಶ್ರಾವಂತಿ ಇವಳಿಗೆ ಹಿಂಸೆ ನೀಡುತ್ತಿದ್ದಾರೆ ಇಂದೂ ಏನಾದರು ಮಾಡಿ ಹಣ ತಂದು ಕೊಡಬೇಕು ಎಂದು ಹಿಂಸಿಸುತ್ತಿದ್ದರು ಅದಕ್ಕೆ ಚಾಸಾ-**1** ಇವರು ಆರೋಪಿತರನ್ನು ತಮ್ಮ ಮನೆಗೆ ಕರೆಸಿಕೊಂಡಿದ್ದರು, ಅದಕ್ಕೆ ದುಡ್ಡು ತರಲೇಬೇಕು ಎಂದು ಹೇಳಿದಾಗ ಅವರು ಹೊಂದಿಸಿಕೊಂಡು ಬರುತೇ‌ತೇನೆ ಎಂದು ಹೇಳಿ ಹೋಗಿದ್ದರು, ಆಸಮಯದಲ್ಲಿ

ಆರೋಪಿತರೆಲ್ಲರೂ ಶ್ರಾವಂತಿ ಇವಳಿಗೆ ಉಟವನ್ನು ಕೊಡದೇ ಹಾಗೂ ಮಗುವಿಗೆ ಕುಡಿಸಲು ಹಾಲನ್ನು ಕೊಡದೆ ಹಿಂಸಿಸಿದ್ದಾರೆ ಎಂದು ನನ್ನ ಮುಂದೆ ಹೇಳಿದ್ದ ತಂದ ನಂತರ **1** ನೇ ಆರೋಪಿ ಚಾಸಾ-**1** ಇವರಿಗೆ ದೂರಣವಾಣಿ ಕರೆ ಮಾಡಿ ಅದರಲ್ಲಿ ನಿನ್ನ ತಂಗಿ ನೇಣು ಹಾಕಿ ಕೊಂಡಿದ್ದಾಳೆ ಎಂದು ತಿಳಿಸಿದ್ದ, ಎಂದು ಚಾಸಾ-**1** ಇವರು ನನಗೆ ತಿಳಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮದುವೆಯನ್ನು **1** ನೇಆರೋಪಿ ತನ್ನ ಖರ್ಚಿನಿಂದ ಮಾಡಿಕೊಂಡಿದ್ದಾನೆ ಚಾಸಾ-**1** ಇವರು ಕೇವಲ ಆರತಕ್ಷತೆಯನ್ನು ಮಾತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ ವರದಕ್ಷಿಣೆ ಹಣ ಮತ್ತು ಬಂಗಾರದ ಆಭರಣಗಳನ್ನು ಕೊಡುವಾಗ ಎಷ್ಟು ಸಮಯ ಆಗಿತ್ತು ಎಂದು ನಿಖರವಾಗಿ ನೆನಪಿಲ್ಲ ಆದರೆ ಮಧ್ಯಾಹ್ನ **02.00** ಗಂಟೆ ಒಳಗೆ ಆಗಿತ್ತು. ಕಲ್ಯಾಣ ಮಂಟಪದಿಂದ ಚಾಸಾ-**1** ಇವರಮನೆಗೆ ಸುಮಾರು **2** ಕಿ.ಮೀ ಅಂತರ ಇರಬಹುದು. ನಾನು ಬಿ.ಜೆ.ಪಿಯ ಪರವಾಗಿ ಮಹಾನಗರ ಪಾಲಿಕೆಯ ಸದಸ್ಯನಿದ್ದೇನೆ. **2020** ರಲ್ಲಿ ಸೋಮಶೇಖರ ರೆಡ್ಡಿ ಬಳ್ಳಾ4 ಯ ಶಾಸಕರಾಗಿದ್ದರು ಎಂದರೆ ಸರಿ. ನಾನು ಸೋಮಶೇಖರ ರೆಡಿ ಇವರ ಮೂಲಕ ಪೊಲೀಸರಿಗೆ ಒತ್ತಡ ಹಾಕಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-**1** ಇವರ ಸ್ನೇಹಿತ ಎಂದರೆ ಅವರ ಒಳ್ಳೆಯ ಪರಿಚಯ ಇದೆ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಾನು, ಚಾಸಾ-**1**, ಚಾಸಾ-**16** ಎಲ್ಲರೂ ಆತ್ಮಿಯರು ಎಂದರೆ ಸರಿ. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಕೂಡ ನನಗೆ ಚಾಸಾ-**1** ಇವರು ಆತ್ಮಿಯರು ಆಗಿದ್ದರಿಂದ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**C/c, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.